ಇಬ್ಬರ ಒಪ್ಪಿಗೆಯಿಂದ ಮತ್ತು ಯಾವ ಕಾನೂನಿನ ಒತ್ತಡ ಇಲ್ಲದೆ ಮಾಡಿಸಿ ಮಾನವೀಯತೆಯ ದೃಷ್ಟಿಯಿಂದ ಎರಡು ಗುಂಪುಗಳನ್ನು ಸೇರಿಸಿದ್ದೇವೆ. ಈ ಸಂದರ್ಭದಲ್ಲಿ ಮದುವೆ ಆಗುವ ಹುಡುಗ ಮೂರು ಷರತ್ತುಗಳನ್ನು ಹಾಕಿದ, ಇವತ್ತಿನದಿವಸ ಎಲ್ಲಾ ಹಳ್ಳಿಗಳಲ್ಲಿಯೂ ಆ ಷರತ್ತು ಬರಬೇಕು. ಅವನ ಷರತ್ತು ಏನೆಂದರೆ ಮೊದಲನೆಯದು, ಆ ಊರಿನಲ್ಲಿ ಎರಡು ಗುಂಪುಗಳಿವೆ, ಅದರಲ್ಲಿ ಹುಡುಗನ ಕಡೆ 40 ಮನೆಗಳು ಮತ್ತು ಹುಡುಗಿಯ ಕಡೆ 60 ಮನೆ, ಹೀಗೆ ಎರಡು ಗುಂಪುಗಳಿದ್ದವು. ಅವನು ಮದುವೆ ಆಗಬೇಕಾದರೆ ಎರಡು ಗುಂಪು ಒಂದಾದರೆ ಮಾತ್ರ ಮದುವೆ ಆಗುತ್ತೇನೆಂದು ಹೇಳಿದ. ಈ ವಿಷಯ ಅಲ್ಲಿ ಸೇರಿದ ಸಹಸ್ರಾರು ಜನರಿಗೆ ಮೆಚ್ಚುಗೆ ಪಡಿಸುವಂತಹ ವಿಚಾರವಾಗಿತ್ತು. ಎರಡನೆಯದು ಅತ್ಯಂತ ಬಡತನದಿಂದಿರುವ ಆ ಹೆಣ್ಣುಮಗಳ ಮನೆಯಿಂದ ಒಂದು ನಯಾಪೈಸೆ ಬೇಡವೆಂದು ಮತ್ತು ಮದುವೆಗಾಗಿ ಅವರು ಒಂದು ಬಿಡಿಗಾಸನ್ನು ಖರ್ಚು ಮಾಡಬಾರದೆಂದು ಹೇಳಿದ ಮತ್ತು ಮೂರನೆಯದು, ಹುಡುಗಿ ನನ್ನನ್ನು ಇಷ್ಟೊಂದು ಪ್ರೀತಿಸಿರುವುದರಿಂದ ಅವಳು ಸಂಪೂರ್ಣವಾಗಿ ಅವರ ಮನೆಯ ವಾತಾವರಣವನ್ನು ಬಿಟ್ಟು ನನ್ನ ಜೊತೆಯಲ್ಲಿ ವಾಸ ಮಾಡಬೇಕೆಂದು ಈ ಮೂರು ಷರತ್ತುಗಳನ್ನು ಹಾಕಿದ್ದನು. ಈ ವಿವಾದ ಸಹಸ್ರಾರು ಜನ ರೈತರ ಮುಂದೆ ಮತ್ತು 8 ಜನ ಶಾಸಕರ ಮುಂದೆ ಹಾಗೂ ಜಿಲ್ಲಾಧಿಕಾರಿಗಳ ಮುಂದೆ ಅಂತ್ಯಗೊಂಡಿದ್ದಕ್ಕೆ ಸಂತೋಷವಾಯಿತು. ಈ ಹುಡುಗನಿಗೆ ಮೈಸೂರು ಶುಗರ್ ಕಂಪನಿಯಲ್ಲಿ ಕೆಲಸ ಕೊಡಲು ಕಂಪನಿಯ ಅಧ್ಯಕ್ಷರ ಜೊತೆ ಮಾತನಾಡಿದ್ದೇನೆ ಮತ್ತು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಅವರ ಅನುಮತಿಯನ್ನು ಪಡೆದು ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಿಕೊಡುತ್ತೇನೆ. ಇವರಿಬ್ಬರಲ್ಲಿ ಯಾವುದೇ ಅನುಮಾನ ಇಲ್ಲ ಮತ್ತು ಒಳ್ಳೆಯ ದಾಂಪತ್ಯ ಜೀವನ ಮಾಡುತ್ತಾರೆಂದು ನನಗೆ ಸಂಪೂರ್ಣ ನಂಬಿಕೆ ಇದೆ.

2. ವರದಿಗಳನ್ನೊಪ್ಪಿಸುವುದು

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) : (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೆ, ಮಾಜಿ ಸಚಿವರಾದ ಶ್ರೀ ಬಿ. ಸೋಮಶೇಖರ್ ಅವರ ಮೇಲಿನ ಆರೋಪದ ಬಗ್ಗೆ ನೇಮಿಸಲಾಗಿದ್ದ ನ್ಯಾಯಮೂರ್ತಿ ಶ್ರೀ ಶಿವಶಂಕರ್ ಭಟ್ ಆಯೋಗದ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನೊಪ್ಪಿಸಲಾಯಿತು.

3. ಚುನಾವಣಾ ಪ್ರಸ್ತಾಪ

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) : (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೆ,

1) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 265(1) ರ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.